# ಇಸ್ಲಾಮೀ ಸಮಾಜ ಸೇವೆ ಮತ್ತು ನಮ್ಮ ಸಮಾಜ

ಸರ್ವಸ್ತುತಿ ಸ್ತೋತ್ರಗಳು ಸರ್ವಲೋಕದ ಒಡೆಯ ಸೃಷ್ಟಿಕರ್ತನಾದ ಅಲ್ಲಾಹನಿಗೆ ಮೀಸಲು. ಅಲ್ಲಾಹನ ಸೃಷ್ಟಿಗಳಲ್ಲಿ ಮಾನವರನ್ನು ಎಲ್ಲಾ ಸೃಷ್ಟಿಗಿಂತಲೂ ಶ್ರೇಷ್ಠತೆಯನ್ನು ನೀಡಿದ್ದಾನೆ. ಮಾನವನಿಗೆ ಬುದ್ಧಿಶಕ್ತಿ ಮತ್ತು ವಿವೇಕವನ್ನು ಕರುಣಿಸುವುದರಿಂದ ಇತರ ಸೃಷ್ಟಿಗಳಿಗಿಂತ ಭಿನ್ನವಾಗಿ ಶ್ರೇಷ್ಠತೆಯನ್ನು ಹೊಂದಿದ್ದಾನೆ. ಎರಡು ದೇವಚರರನ್ನು ಪ್ರತಿಯೊಬ್ಬನೊಂದಿಗೆ ಹುಟ್ಟಿನಿಂದ ಸಾವಿನ ತನಕ ಕಾವಲುಗಾರರನ್ನಾಗಿ ನೇಮಿಸಿ ಎಲ್ಲಾ ಕರ್ಮಗಳು ಬರೆಯಲ್ಪಡುತ್ತವೆ ಮತ್ತು ಮರಣೋತ್ತರ ಜೀವನದಲ್ಲಿ ಅಲ್ಲಾಹನ ಸನ್ನಿಧಿಯಲ್ಲಿ ಅವನ ಕೈಗೆ ನೀಡಲ್ಪಡುವುದು. ತನ್ನ ಶರೀರದ ಪೂರ್ತಿ ನಿಯಂತ್ರಣ ಅವನಲ್ಲಿ ಇರದಿದ್ದರೂ ಮನಸ್ಸಿನ ನಿಯಂತ್ರಣವನ್ನು ಪೂರ್ತಿಯಾಗಿ ಅವನಿಗೆ ನೀಡಲಾಗಿದೆ. ಸನ್ಮಾರ್ಗ ದುರ್ಮಾರ್ಗ, ಒಳಿತು, ಕೆಡುಕು ಇವುಗಳನ್ನು ತನ್ನ ವಿವೇಚನೆಯಿಂದ ಸ್ವೀಕರಿಸುವುದು ಅಥವಾ ಸ್ವೀಕರಿಸದಿರುವುದು ಅವನ ಆಯ್ಕೆಗೆ ಬಿಡಲಾಗಿದೆ. ಲೋಕದಲ್ಲಿರುವ ಇತರ ಸೃಷ್ಟಿಗಳು ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಮಾನವನ ಜೀವನ ನಿರ್ವಹಣೆಗೆ ಒಂದಲ್ಲ ಒಂದು ವಿಧದಲ್ಲಿ ಅಗತ್ಯ ಮತ್ತು ಉಪಕಾರಿಯಾಗಿದೆ.



ಜಿನ್ನಗಳು ಮತ್ತು ಮಾನವರನ್ನು ಅಲ್ಲಾಹನ 'ಇಬಾದತ್' (ಆರಾಧನೆಗಾಗಿ) ಸೃಷ್ಟಿಸಲಾಗಿದೆ ಎಂದು ಪವಿತ್ರ ಕುರ್‌ಆನ್ ನಿಂದ ತಿಳಿದು ಬರುತ್ತದೆ. ಇತರ ಎಲ್ಲಾ ಸೃಷ್ಟಿಗಳಿಗೆ ಜೀವನ ನಿರ್ವಹಿಸಲು ಒಂದು ಕ್ರಮವನ್ನು ಅಲ್ಲಾಹನು ರೂಪಿಸಿದ್ದಾನೆ. ಮಾನವರಿಗೂ ಸ್ವಂತ ಹಾಗೂ ಸಾಮಾಜಿಕ ಜೀವನ, ಆರಾಧನೆ ಮತ್ತು ಇತರ ಜೀವನ ಕ್ರಮಗಳಿಗೆ ಪವಿತ್ರ ಕುರ್‌ಆನ್ ಮತ್ತು ಪ್ರವಾದಿ ವಚನಗಳಿಗನುಸಾರವಾಗಿ ಒಂದು ನಿರ್ದಿಷ್ಟ ಕ್ರಮ ವಿಧಿಸಲಾಗಿದೆ. ಅಲ್ಲಾಹನು ಮಾನವರನ್ನು ವರ್ಣ, ಗೋತ್ರ, ಬುದ್ಧಿಶಕ್ತಿ, ದೇಹದಾರ್ಢ್ಯ ಮತ್ತು ಆರ್ಥಿಕ ಸಾಮರ್ಥ್ಯಗಳಲ್ಲಿ ಭಿನ್ನತೆಯನ್ನು ಸೃಷ್ಟಿಸಿದ್ದಾನೆ. ಪವಿತ್ರ ಕುರ್‌ಆನ್ ನ ಸೂಕ್ತಗಳಿಂದ ಅವು ವೇದ್ಯವಾಗುತ್ತದೆ. "ಅಲ್ಲಾಹನು ನಮ್ಮ ಪೈಕಿ ಕೆಲವರಿಗೆ ಕೆಲವರ ಮೇಲೆ ಜೀವನಾಧಾರದಲ್ಲಿ ಶ್ರೇಷ್ಠತೆಯನ್ನು ದಯಪಾಲಿಸಿದ್ದಾನೆ" (ಪವಿತ್ರ ಕುರ್‌ಆನ್ ಅಧ್ಯಾಯ 16:71) "ನಮ್ಮ ಪ್ರಭು ತಮಗಿಷ್ಟ ಬಂದವರಿಗೆ ಜೀವನಾಧಾರವನ್ನು ವಿಶಾಲಗೊಳಿಸುತ್ತಾನೆ ಮತ್ತು ತಮಗಿಷ್ಟ ಬಂದವರಿಗೆ ಸಂಕುಚಿತಗೊಳಿಸುತ್ತಾನೆ. ಅವನು ದಾಸರ ಸ್ಥಿತಿಗಳನ್ನು ಅರಿತವನಾಗಿರುತ್ತಾನೆ ಮತ್ತು ಅವರನ್ನು ವೀಕ್ಷಿಸುತ್ತಿದ್ದಾನೆ" (ಕುರ್‌ಆನ್ ಅಧ್ಯಾಯ 17:30) "ಅವನೇ ನಮ್ಮನ್ನು ಭೂಮಿಯ ಪ್ರತಿನಿಧಿಯನ್ನಾಗಿ ಮಾಡಿದನು ಮತ್ತು ನಮಗೆ ಕೊಟ್ಟಿರುವುದರಲ್ಲಿ ನಮ್ಮನ್ನು ಪರೀಕ್ಷಿಸಲಿಕ್ಕಾಗಿ ನಮ್ಮಲ್ಲಿ ಕೆಲವರಿಗೆ ಕೆಲವರಿಗಿಂತ ಉನ್ನತ ಪದವಿಯನ್ನು ನೀಡಿದನು" (ಕುರ್‌ಆನ್ 6:165).

ಸೃಷ್ಟಿಕರ್ತನಾದ ಅಲ್ಲಾಹನು ಮಾನವನಿಗೆ ತನ್ನ ಅಗತ್ಯಗಳನ್ನು ನೇರವಾಗಿ ತಲುಪಿಸದೆ ಅವಶ್ಯಕವಾದ ವ್ಯವಸ್ಥೆಗಳನ್ನು ಮಾಡಿರುತ್ತಾನೆ. ಮಾನವರಲ್ಲಿರುವ ಯಾವುದೇ ಗುಣ, ಸಾಮರ್ಥ್ಯ, ಸಂಪತ್ತು ಇತ್ಯಾದಿಗಳು, ಅವುಗಳಿಲ್ಲದ ಅಗತ್ಯವಿರುವವರಿಗೆ ಇತರರನ್ನು ಮಾಧ್ಯಮವನ್ನಾಗಿಸುವ ಮೂಲಕ ನೆರವೇರಿಸುತ್ತಾನೆ. ಇಸ್ಲಾಮಿನ ದೃಷ್ಟಿಯಲ್ಲಿ ಅಲ್ಲಾಹನೇ ಸಂಪತ್ತಿನ ನೈಜ ಒಡೆಯನಾಗಿದ್ದಾನೆ. ಆತನೇ ಅದರ ಸೃಷ್ಟಿಕರ್ತ ಮತ್ತು ವಿಧಾತ. ಮಾನವನಿಗೆ ಅದರ ಹೊಣೆಯನ್ನು ವಹಿಸಿಕೊಟ್ಟು ಆತನನ್ನು ಅದರ ಪ್ರತಿನಿಧಿಯಾಗಿ ನೇಮಿಸಲಾಗಿದೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಆತನು ಸಂಪತ್ತಿನ ನೈಜ ಒಡೆಯನನ್ನು ಪ್ರತಿನಿಧಿಸುವ ವ್ಯಕ್ತಿಯಾಗಿದ್ದಾನೆ. ನೈಜ ಒಡೆಯನಾದ ದೇವನ ಆಜ್ಞೆ ಮತ್ತು ಇಂಗಿತದಂತೆ ಸಂಪತ್ತನ್ನು ಸಂರಕ್ಷಿಸಿ ಕಾರ್ಯ ನಿರ್ವಹಿಸಲಿಕ್ಕಾಗಿ ನೇಮಕಗೊಂಡ ಪ್ರತಿನಿಧಿಯಾಗಿದ್ದಾನೆ. ವಸ್ತುತಃ ಶ್ರೀಮಂತರ ವಶದಲ್ಲಿರುವ ಸಂಪತ್ತು ಅಲ್ಲಾಹನದ್ದೆಂದು ಈ ವಾಕ್ಯಗಳಿಂದ ವ್ಯಕ್ತವಾಗುತ್ತದೆ. ಅಲ್ಲಾಹನು ಅದನ್ನು ಅವರಿಗೆ ಕೇವಲ ವಹಿಸಿಕೊಟ್ಟಿರುತ್ತಾನೆ. ಅದರಲ್ಲಿ ನಿರ್ದಿಷ್ಟ ಪಾಲು ಇತರ ಕೆಲವರ ಹಕ್ಕೆಂದು ಅಲ್ಲಾಹ್ ಸಾರಿದ್ದಾನೆ. ವಸ್ತುತಃ ಪಾಲು ಹಕ್ಕುದಾರರಿಗೆ ಸಿಗಲಿಕ್ಕಾಗಿ ಇಸ್ಲಾಮ್ ಕೇವಲ ಉಪದೇಶ, ಬೆದರಿಕೆ, ಆಮಿಷ ಅಥವಾ ದಾನ ನೀಡುವ ಕರೆ ನೀಡಿ ಸುಮ್ಮನಿರಲಿಲ್ಲ. ಏಕೆಂದರೆ ಅವು ಕಠೋರ ಹೃದಯ, ದುರಾಸೆ ಮತ್ತು ದುರ್ಬಲ ವಿಶ್ವಾಸವಿರುವಾಗ ಪರಿಣಾಮಕಾರಿಯಾಗುವುದಿಲ್ಲ. ಆದ್ದರಿಂದ ನಿರ್ದಿಷ್ಟ ಪಾಲನ್ನು ಶ್ರೀಮಂತರಿಂದ ವಸೂಲು ಮಾಡಿ ಬಡವರಿಗೆ ವಿತರಣೆ ಮಾಡುವ ಶಾಸನಾತ್ಮಕ ಅಧಿಕಾರವನ್ನೂ ಇಸ್ಲಾಮ್, ಸರಕಾರಗಳಿಗೆ ನೀಡುತ್ತವೆ. ದೇವ ಕಾನೂನುಗಳನ್ನು ಯಾರಾದರೂ ಉಲ್ಲಂಘಿಸಿದರೆ ಅವರು ಸ್ವತಃ ಅಥವಾ ಬಿರ್ಬಂಧಿತರಾಗಿ ಅದಕ್ಕೆ ಬದ್ಧರಾಗುವ ತನಕ ಇಸ್ಲಾಮ್ ಅವರೊಂದಿಗೆ ಹೋರಾಡುವುದು. ಇಲ್ಲಿ ಇಸ್ಲಾಮ್ ಎರಡು ಮಾರ್ಗಗಳನ್ನು ಅವಲಂಭಿಸಿದೆ. 1. ಧಾರ್ಮಿಕ ಉಪದೇಶ ಮತ್ತು ನೈತಿಕ ಪ್ರೇರಣೆ. 2. ಕಾನೂನು ಕ್ರಮ ಮತ್ತು ಸರಕಾರದ ಒತ್ತಡ. ನಮ್ಮ ದೇಶದಲ್ಲಿರುವ ಆದಾಯ ತೆರಿಗೆ ಎರಡನೇ ಮಾರ್ಗಕ್ಕೆ ಉದಾಹರಣೆಯಾಗಿದೆ. ಇತರ ದೇಶಗಳಲ್ಲಿ ಆಧುನಿಕ ತತ್ವ ಸಿದ್ಧಾಂತಗಳಾದ 'ಸೋಶಿಯಲಿಝುಮ್', 'ಕಮ್ಯುನಿಝುಮ್', 'ಕ್ಯಾಟಲಿಝುಮ್' ಇತ್ಯಾಡಿಗಳಲ್ಲಿಯೂ ಸರಕಾರದ ಹಸ್ತಕ್ಷೇಪ ಕಡ್ಡಾಯವಾಗಿದೆ.

ಶ್ರೀಮಂತರ ವಶದಲ್ಲಿರುವ ಸಂಪತ್ತಿನಿಂದ ಬಡವರ ಹಕ್ಕನ್ನು ನೀಡಲು ಪವಿತ್ರ ಕುರ್‌ಆನ್‌ನಲ್ಲಿ ಅನೇಕ ಕಡೆ ಆದೇಶಿಸಿರುವನು. ತನ್ನ ಅಗತ್ಯಗಳನ್ನು ಪೂರೈಸಿಕೊಳ್ಳಲು, ಗಳಿಸುತ್ತಿದ್ದರೂ ಸಾಕಾಗದವರು, ಕಡಿಮೆ ಗಳಿಕೆಯುಳ್ಳವರು, ಗಳಿಸಲಸಾಧ್ಯವಾಗಿತುವವರು ಮತ್ತು ಪ್ರಕೃತಿ ವಿಕೋಪ, ಗಲಭೆಗಳಲ್ಲಿ ಮನೆ ಮಠ ಕಳಕೊಂಡವರು ಬಡವರಾಗಿದ್ದಾರೆ. 1. ದುಡಿದು ಗಳಿಸಲು ಸಾಧ್ಯವಿರುವವರು. 2. ದುಡಿದು ಗಳಿಸಲು ಸಾಧ್ಯವಿರದ ವಿಕಲಾಂಗರು, ರೋಗಿಗಳು, ದುರ್ಬಲರು, ಮಂದ ಬುದ್ಧಿಯವರು ಮತ್ತು ಮುದಿತನದವರು, ಇಂತಹವರಿಗೆ ಅವರ ಹಕ್ಕನ್ನು ನೀಡಲು ಕಡ್ಡಾಯ ದಾನವನ್ನು ಮತ್ತು ಐಚ್ಛಿಕ ದಾನಗಳನ್ನು ಆದೇಶಿಸಲಾಗಿದೆ. ಝಕಾತ್, ಕುರ್ಬಾನಿಯ ಮಾಂಸ, ಚರ್ಮ, ಸದ್‌ಕಾ ಇತ್ಯಾದಿ ಈ ಸಾಲಿಗೆ ಸೇರುತ್ತದೆ.

ಝಕಾತ್(ಕಡ್ಡಾಯ ದಾನ) : ಸಮಾಜದ ಸಂಪತ್ತಿನಲ್ಲಿ ನಿಗದಿತ ಪ್ರಮಾಣವನ್ನು ಒಟ್ಟುಗೂಡಿಸಿ, ಸರಕಾರದ (ಇಸ್ಲಾಮೀ ಸರಕಾರ ಇರದಿದ್ದಲ್ಲಿ ಸ್ಥಾನೀಯ ಜಮಾತ್ / ಸಂಘ ಸಂಸ್ಥೆ) ಹೊಣೆಗೆ ಒಪ್ಪಿಸಿರುವ, ದುರ್ಬಲ ವರ್ಗಗಳ ಹಕ್ಕಾಗಿದೆ. ಇದು ಇಸ್ಲಾಮಿನ ಮೂರನೇ ಬುನಾದಿಯೂ ಪ್ರಬಲ ಸ್ಥಂಭವೂ ಗೌರವಾರ್ಹ ಚಿಹ್ನೆಯೂ ನಾಲ್ಕು ಆರಾಧನೆಗಳ ಪೈಕಿ ಒಂದೂ ಆಗಿದೆ. "ಅವರು

ಪಶ್ಚಾತ್ತಾಪ ಪಟ್ಟು ಮರಳಿ, ನಮಾಝ್ ಸಂಸ್ಥಾಪಿಸಿ, ಝಕಾತ್ ಕೊಟ್ಟರೆ ಧರ್ಮದಲ್ಲಿ ನಮ್ಮ ಸಹೋದರರಾಗಿದ್ದಾರೆ."(ಕುರ್‌ಆನ್ ಅಧ್ಯಾಯ 9:11) ನಮಾಝ್ ಮತ್ತು ಝಕಾತನ್ನು ಏಕ ಕಾಲದಲ್ಲಿ ಕಡ್ಡಾಯಗೊಳಿಸಲಾಗಿತ್ತು. ಅವುಗಳ ಮಧ್ಯೆ ಭಿನ್ನತೆ ತೋರಿಸಲಾಗಿಲ್ಲವೆಂದು ಇದರಿಂದ ವ್ಯಕ್ತವಾಗುತ್ತದೆ. "ಝಕಾತ್ ಕೊಡದಾತನಗೆ ನಮಾಝ್ ಕೂಡಾ ಇಲ್ಲ" ಎಂದು ಅಬ್ದುಲ್ಲಾ ಬಿನ್ ಮಸ್‌ಊದ್ (ರ.ಅ.) ಒಮ್ಮೆ ಹೇಳಿದರು. "ವಿಶ್ವಾಸಿಗಳೇ ನೀವು ಸಂಪಾದಿಸಿದ ಉತ್ತಮ ವಸ್ತುಗಳಿಂದಲೂ ಭೂಮಿಯಿಂದ ನಾವು ನಮಗೆ ಉತ್ಪಾದಿಸಿಕೊಟ್ಟಿರುವುದವುಗಳಿಂದಲೂ ವ್ಯಯಿಸಿರಿ" (ಕುರ್‌ಆನ್ ಅಧ್ಯಾಯ 2:267). ವ್ಯವಸಾಯ, ವ್ಯವಹಾರ, ಉದ್ಯೋಗ, ಜಾನುವಾರು, ಗಣಿಗಾರಿಕೆ ಹಾಗೂ ಮಾನವನಗೆ ಯಾವುದೇ ರೀತಿಯಲ್ಲಿ ಉಪಯೋಗವಾಗುವ ಇತರೆ ಉತ್ಪಾದನೆಗಳಿಗೂ ಝಕಾತ್ ಅನ್ವಯವಾಗುತ್ತದೆ. ಝಕಾತ್ ನೀಡಬೇಕಾದ ಪ್ರಮಾಣದಲ್ಲಿ ವ್ಯತ್ಯಾಸಗಳಿವೆ. ಝಕಾತ್ ಕಡ್ಡಾಯವಾಗಲು ಸಂಪತ್ತಿಗೆ ಒಂದು ಸೀಮೆಯನ್ನು ನಿರ್ಣಯಿಸಲಾಗಿದೆ. ಝಕಾತನ್ನು ಯಾರಿಗೆ ನೀಡಬೇಕು ಮತ್ತು ಯಾರು ಪಡೆಯಲು ಅರ್ಹರು ಎಂಬುದಕ್ಕೂ ನಿರ್ದೇಶನಗಳೂ ಕುರ್‌ಆನ್‌ನಲ್ಲಿ ನೀಡಲಾಗಿದೆ.

ಫಿತ್ರ್ ಝಕಾತ್ : ಜನ ಸಂಖ್ಯೆಯ ಆಧಾರದಲ್ಲಿ ರಮಝಾನ್ ಉಪವಾಸ ವ್ರತಾಚರಣೆಯ ಪರಿಪೂರ್ಣತೆ ಮತ್ತು ಹಬ್ಬದ ಮಾನ್ಯತೆಗಾಗಿ ನಿರ್ಣಯಿಸಲಾದ ಕಡ್ಡಾಯದಾನವಾಗಿದೆ 'ಝಕಾತುಲ್ ಫಿತ್ರ್'. ಇದು ಝಕಾತ್ ಕಡ್ಡಾಯವಾಗುವಷ್ಟು ಸಂಪತ್ತಿರುವವರಿಗೆ ಮಾತ್ರ ಸೀಮಿತವಾಗಿಲ್ಲ. ಬದಲಾಗಿ ಗುಲಾಮ, ಸ್ವತಂತ್ರ, ಸ್ತ್ರೀ ಪುರುಷ ಎಂಬ ವ್ಯತ್ಯಾಸವಿಲ್ಲದೆ ಈದ್ ನಮಾಝ್‌ಗಿಂತ ಮೊದಲು ಆದಿನ ಹುಟ್ಟಿದ ಮಗುವಿನ ಕಡೆಯಿಂದಲೂ ಅದರ ಹೊಣೆಗಾರರು, ಹಬ್ಬದ ದಿನ ತನ್ನ ಮತ್ತು ಕುಟುಂಬದ ಖರ್ಚು-ವೆಚ್ಚ ಕೇದು ಬಾಕಿ ಉಳಿಯುವ ಎಲ್ಲರೂ ನಿಗದಿತ ಪ್ರಮಾಣದಲ್ಲಿ ಝಕಾತುಲ್ ಫಿತ್ರ್ ನೀಡಬೇಕೆಂದಿದೆ.

ಕುರ್ಬಾನಿ : ಆಯ್ದ ಜಾತಿಯ ಕೆಲವು ಜಾನುವಾರುಗಳನ್ನು ಅಲ್ಲಾಹನಗೆ ಬಲಿ ಅರ್ಪಿಸಿ ಅದರ ಮಾಂಸ ಹಂಚಿ ಚರ್ಮವನ್ನು ಬಡವರಿಗೆ ದಾನ ಮಾಡುವುದು ಒಂದು ಸಣ್ಣ ಕಾರ್ಯಕ್ರಮ ಎಂದು ನಾವು ಭಾವಿಸುತ್ತೇವೆ. ಆದರೆ ಬರೀ ನಮ್ಮ ರಾಜ್ಯದಲ್ಲಿ ಮಾಡಲಾಗುವ ಕುರ್ಬಾನಿ ಚರ್ಮಗಳನ್ನು ಒಟ್ಟುಗೂಡಿಸಿದರೆ ಅನೇಕ ಕೋಟಿ ರುಪಾಯಿಗಳ ಬಂಡವಾಳದಲ್ಲಿ ವರ್ಷಕ್ಕೊಂದರಂತೆ ಬೃಹತ್ ಕೈಗಾರಿಕೆಗಳನ್ನು ಪ್ರಾರಂಭಿಸಬಹುದು. ಇದರಿಂದಾಗಿ ಸಾವಿರಾರು ನಿರುದ್ಯೋಗಿಗಳಿಗೆ ಉದ್ಯೋಗ ದೊರೆತು ಅವರ ಜೀವನಮಟ್ಟ ಸುಧಾರಿಸುವುದಲ್ಲದೆ, ಲಾಭಾಂಶದಲ್ಲಿ ಅಶಕ್ತರಿಗೆ, ಅನಾಥರಿಗೆ ಆದರೆಯಾಗಬಹುದು.

ಸದ್‌ಕಾ ಮತ್ತು ಖೈರಾತ್ : " ...... ಅಲ್ಲಾಹನ ಸಂಪ್ರೀತಿಗಾಗಿ ತನ್ನ ಮನ ಮೆಚ್ಚುಗೆಯ ಸಂಪತ್ತನ್ನು ಬಂಧುಗಳಿಗಗೂ ಅನಾಥರಿಗೂ ನಿರ್ಗತಿಕರಿಗೂ ಪ್ರಯಾಣಿಕರಿಗೂ ಸಹಾಯಾರ್ಥಿಗಳಿಗೂ ದಾಸ್ಯವಿಮೋಚನೆಗಾಗಿಯೂ ವ್ಯಯಿಸುವುದು..... ಇವರೇ ಸತ್ಯ ಸಂಧರು ಮತ್ತು ಧರ್ಮನಿಷ್ಠರು" (ಕುರ್ ಆನ್ ಅಧ್ಯಾಯ 2:177). "ಅಲ್ಲಾಹನ ಮಾರ್ಗದಲ್ಲಿ ತನ್ನ ಸಂಪತ್ತನ್ನು ಖರ್ಚು ಮಾಡುವವರ ಖರ್ಚಿನ ಉಪಮೆ ಒಂದು ಕಾಳನ್ನು ಬಿತ್ತಿ ಅದರಿಂದ ಏಳು ತೆನೆಗಳು ಹೊರಟು, ಪ್ರತಿಯೊಂದು ತೆನೆಯಲ್ಲಿ ನೂರು ಕಾಳುಗಳೀರುವಂತಿದೆ. ಇದೇ ರೀತಿಯಲ್ಲಿ ಅಲ್ಲಾಹ್ ತಾನುದ್ದೇಶಿಸಿದವನ ಕರ್ಮಗಳಿಗೆ ವೃದ್ಧಿಯನ್ನು ದಯಪಾಲಿಸುತ್ತಾನೆ. ಅವನು ಅತ್ಯಂತ ಉದಾರಿಯೂ, ಸರ್ವಜ್ಞನೂ ಆಗಿರುತ್ತಾನೆ. ಅಲ್ಲಾಹನ ಮಾರ್ಗದಲ್ಲಿ ತಮ್ಮ ಸಂಪತ್ತನ್ನು ಖರ್ಚು ಮಾಡುವವರ, ಖರ್ಚು ಮಾಡಿದುದನ್ನು ಆಡಿ ಕೊಳ್ಳದವರ ಮತ್ತು ಪರಪೀಡನೆಗೈಯದವರ ಪ್ರತಿಫಲವು ಅವರ ಪ್ರಭುವಿನ ಬಳಿಯಲ್ಲಿದೆ ಅವರಿಗೆ ಯಾವತ್ತೂ ಭಯ ಮತ್ತು ವ್ಯಥೆಯ ಸಂಭವವಿಲ್ಲ" (ಕುರ್‌ಆನ್ ಅಧ್ಯಾಯ 2:261-262)

ಐಚ್ಛಿಕ ದಾನ ಧರ್ಮಳು, ಸಾಕಷ್ಟು ಉಳ್ಳವರೂ ಇಲ್ಲದವರೂ ನೀಡಿ ಮೇಲಿನ ಅಮಾನತ್‌ನಂತೆ ಅನೇಕ ಪಟ್ಟು ಮರಳಿ ಸಿಗುವ ಪುಣ್ಯದಾಯಕ ಕೆಲಸವಾಗಿದೆ. ಇದರಲ್ಲಿ ಒಮ್ಮೆ ಮಾತ್ರ ಪುಣ್ಯ ಸಿಗುವ ದಾನ ಧರ್ಮಗಳಲ್ಲದೆ ನಿರಂತರವಾಗಿ, ಮರಣ ನಂತರವೂ ಪುಣ್ಯಲಭಿಸುತ್ತಾ ಇರುವ 'ಸವಾಬೆಜಾರಿಯ' ಎಂಬ ಪುಣ್ಯಕಾರ್ಯಗಳೂ ಇವೆ. ಮೇಲಿನ ವಿಷಯಗಳನ್ನು ಗಮನಿಸಿದಾಗ ಇಸ್ಲಾಮ್ ಬಡತನವನ್ನು ಬಗೆಹರಿಸಬೇಕಾದ ಸಮಸ್ಯೆಯನ್ನು ಪರಿಗಣಿಸಿದೆ. ಅದಕ್ಕಾಗಿ ಇಸ್ಲಾಮೀ ಸರಕಾರ ಇಲ್ಲದ ಕಡೆ ನಮಾಝ್‌ಗಿರುವಂತೆ ಸಾಮೂಹಿಕ ವ್ಯವಸ್ಥೆಯಡಿಯಲ್ಲಿ ಕಾರ್ಯ ಪ್ರವೃತ್ತರಾಗಲು ಪ್ರಾಶಸ್ತ್ಯ ನೀಡಬೇಕಾಗಿದೆ. ಸಮಾಜ ಸೇವೆಗೆ ಊರಿನಲ್ಲಿರುವ ಜಮಾತ್‌ಗಳು ಮತ್ತು ಸಂಘ ಸಂಸ್ಥೆಗಳು ಹೊಣೆ ವಹಿಸಿಕೊಂಡರೆ ಕಾರ್ಯಸಾಧನೆ ಈಡೇರಬಹುದು. ದುಡಿಯಲು ಅಥವಾ ವ್ಯವಹರಿಸಲು ಶಕ್ತರಾಗಿರುವವರಿಗೆ ಬೇಕಾದ ಸಲಕರಣೆ ಅಥವಾ ಅನುಕೂಲಗಳನ್ನು ಕಲ್ಪಿಸಿ ಅವರನ್ನು ಸ್ವಾವಲಂಭಿಗಳಾಗುವಂತೆ ಮಾಡುವುದಕ್ಕೆ ಪ್ರಶಸ್ತ್ಯ ಕೊಡಬೇಕು. ಅಶಕ್ತರಿಗೆ ನೆರವು ನೀಡಬೇಕು, ವೈಯುಕ್ತಿಕ ನೆಲೆಯಲ್ಲಿಯೂ ದಾನ ಧರ್ಮಗಳಿಗೆ ಅನುಮತಿಸಲಾಗಿದೆ. ಇಬ್ಬಗೆಯಲ್ಲಿ ಕೆಲವು ನಿಬಂಧನೆಗಳನ್ನು ಪಾಲಿಸುವ ಅಗತ್ಯವಿದೆ. "ಸತ್ಕಾರ್ಯಗಳ ಪ್ರತಿಫಲವು ಮಾಡುವವನ ಉದ್ದೇಶವನ್ನು ಅವಲಂಭಿಸಿದೆ" (ಪ್ರವಾದಿ ವಚನ) "ಒಂದು ಕೈಯಿಂದ ದಾನ ಮಾಡಿದರೆ ಇನ್ನೊಂದಕ್ಕೆ ತಿಳಿಯಬಾರದು" (ಪ್ರವಾದಿ ವಚನ). ತೋರಿಕೆಗಾಗಿ ದಾನ ಧರ್ಮಗಳನ್ನು ಮಾಡುವುದು, ಖರ್ಚು ಮಾಡಿ ಆಡಿಕೊಳ್ಳುವುದು ಹಾಗೂ ಸಹಾಯ ಮಾಡಲಾದವರಿಂದ ಪ್ರತಿಫಲದ ಅಪೇಕ್ಷೆ ಇಟ್ಟುಕೊಳ್ಳುವುದರಿಂದ ಈ ಲೋಕದಲ್ಲಿ ಲಾಭ ಹೊರತು ಪರಲೋಲಕಲ್ಲಿ ಏನೂ ಸಿಗಲಾರದು ಎಂಬುದು ಗಮನಿಸಬೇಕು.

ಸೃಷ್ಟಿಕರ್ತ ಮತ್ತು ಪರಿಪಾಲಕನಾದ ಅಲ್ಲಾಹನು ಬಡತನ ಮತ್ತು ಕಷ್ಟ ನಿವಾರಣೆಗಾಗಿ ವ್ಯವಸ್ಥೆ ಕಲ್ಪಿಸಿದರೂ ಅದನ್ನು ಅನುಸರಿಸಲಾಗುವುದಿಲ್ಲ. ಸ್ವಯಂಕೃತ ಅಪರಾಧಗಳಾದ ದುಂದುವೆಚ್ಚಗಳು, ಆಡಂಬರಗಳು ಮತ್ತು ಇವುಗಳಿಂದಾಗಿ ಸಾಲ ಸೋಲದಲ್ಲಿ ಮುಳುಗಿ ಬಡವರಾಗುತ್ತಿರುವ ಎಷ್ಟೋ ಸ್ಥಿರಿವಂತರನ್ನು ನಮ್ಮ ಮಧ್ಯೆ ಕಾಣಬಹುದು. "ಅನಗತ್ಯ ಖರ್ಚು ಮಾಡುವವನು ಶೈತಾನನ ಸಹೋದರನಾಗಿದ್ದಾನೆ" (ಪ್ರವಾದಿ ವಚನ). ಸಂಪತ್ತಿನ ವ್ಯಾಮೋಹದಿಂದಾಗಿ ವರದಕ್ಷಿಣೆ ಎಂಬ ಸಾಮಾಜಿಕ ಅನಿಷ್ಟವನ್ನು ಹುಟ್ಟುಹಾಕಿ ಹೆಣ್ಣು ಮತ್ತು ಹೆತ್ತವರು ಜೀವಮಾನವಿಡೀ ಕಣ್ಣೀರಿಡುವ ಸ್ಥಿತಿಗೆ ತಲುಪಿಸಲಾಗಿದೆ. ಪಾಶ್ಚಿಮಾತ್ಯರನ್ನು ಅನುಸರಿಸಲು ಹೋಗಿ ದೀನ್ ಮತ್ತು ಸಂಪತ್ತನ್ನು ಕಳಕೊಳ್ಳುವವರನ್ನು ಸಮಾಜದಲ್ಲಿ ಕಾಣಬಹುದು. ಒಟ್ಟಾರೆಯಾಗಿ ಒಂದು ಕಡೆ ಕಡಿಮೆ ಪ್ರಮಾಣದಲ್ಲಿ ದೊರೆಯುವ

ದಾನ ಧರ್ಮಗಳೊಂದಿಗೆ ಬಡತನದಿಂದ ಕೆಲವರನ್ನು ಹೊರತರಲು ಪ್ರಯತ್ನಿಸುತ್ತಿತುವಾಗಲೇ ಇನ್ನೊಂದು ಕಡೆ ಸೋಮಾರಿತನ, ಸ್ವಯಂಕೇತ ತಪ್ಪು ಹೆಜ್ಜೆಗಳು, ನಿರುದ್ಯೋಗ ಇತ್ಯಾದಿಗಳಿಂದಾಗಿ ಬಡವರ ಸಾಲಿಗೆ ಇನ್ನೂ ಹೆಚ್ಚು ಸೇರ್ಪಡೆಗೊಳ್ಳುತ್ತಿದ್ದಾರೆ.
ಇಸ್ಲಾಮಿಗನುಸಾರವಾದ ಸಾಮೂಹಿಕ ಸಮಾಜ ಸೇವೆಯಿಂದ ಮತ್ತು ವ್ಯವಸ್ಥಿತ ಕಾರ್ಯಕ್ರಮಗಳಿಂದ ಬಡತನವನ್ನು ಹೋಗಲಾಡಿಸಬಹುದು. ಜಮಾಅತ್ ಮತ್ತು ಸಂಘಸಂಸ್ಥೆಗಳಲ್ಲಿ ಕೆವವರು ನಡೆಸುವ ಅಧಿಕಾರಕ್ಕಾಗಿ ಪೈಪೋಟಿ,ಪ್ರಚಾರಗಿಟ್ಟಿಸಲು ಪೈಪೋಟಿ, ಸ್ವಾರ್ಥ, ಸ್ವಜನ ಪಕ್ಷಪಾತ, ಒಳಜಗಳ, ಅಧಿಕಾರದಲ್ಲಿದ್ದು ಸಮಯ ನೀಡದಿರುವುದು ಇತ್ಯಾದಿಗಳಿಂದಾಗಿ ಪ್ರಾಮಾಣಿಕವಾಗಿ ಸಮಾಜ ಸೇವೆಯಲ್ಲಿ ತೊಡಗಿದ್ದವರನ್ನು ಸಹ ಸಂಶಯದ ದೃಷ್ಟಿಯಿಂದ ನೋಡಲಾಗುತ್ತಿದೆ. ಇದರಿಂದಾಗಿ ಭರವಸೆಯ ಹಾಗೂ ಸಹಕಾರದ ಕೊರತೆಯಿಂದಾಗಿ ಏನೂ ಸಾಧಿಸಲು ಅಸಾಧ್ಯವಾಗುತ್ತದೆ.
ಸಮಾಜ ಸೇವೆಯಲ್ಲಿ ತೊಡಗುವವರು ಬರೇ ಮೂಮಿನ್ ಮಾತ್ರವಾಗಿರದೆ ತನ್ನನ್ನು ಸಂಪೂರ್ಣವಾಗಿ ಇಸ್ಲಾಮಿನಲ್ಲಿ ಪ್ರವೇಶಗೊಳಿಸಿ ಅಲ್ಲಾಹನ ಆದೇಶಗಳನ್ನು ಮತ್ತು ಪ್ರವಾದಿ ಚರ್ಯೆಗಳ ಅನುಸರಣೆಯೊಂದಿಗೆ ಕಾರ್ಯಪ್ರವೃತ್ತರಾದರೆ ಬಡರನವನ್ನು ಹೊಗಲಾಡಿಸಬಹುದು ಎಂಬುವುದಕ್ಕೆ ಯಾವುದೇ ಸಂಶಯವಿಲ್ಲ. ಅರಬ್ ಖಲೀಫರುಗಳ ಕಾಲದಲ್ಲಿಯ ಚರಿತ್ರೆಯೇ ಇದಕ್ಕೆ ಸಾಕ್ಷಿ.

**ಕೆ. ಅಬ್ದುಲ್ ಮಜೀದ್**
**ಆದಿವುಡುಪಿ**